ಜನರು ಪೂರ್ವ ಪ್ರವಾದಿಗಳಿಂದ ಪಡೆದ ಮಾತುಗಳಲ್ಲಿ ಒಂದು ಏನೆಂದರೆ: ನಿನಗೆ ನಾಚಿಕೆ ಇಲ್ಲದಿದ್ದರೆ ನೀನಿಚ್ಛಿಸುವುದನ್ನು ಮಾಡು

ಅಬೂ ಮಸ್ಊದ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಹೇಳಿದರು:
ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಜನರು ಪೂರ್ವ ಪ್ರವಾದಿಗಳಿಂದ ಪಡೆದ ಮಾತುಗಳಲ್ಲಿ ಒಂದು ಏನೆಂದರೆ: ನಿನಗೆ ನಾಚಿಕೆ ಇಲ್ಲದಿದ್ದರೆ ನೀನಿಚ್ಛಿಸುವುದನ್ನು ಮಾಡು." [صحيح] [رواه البخاري]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ಪೂರ್ವ ಪ್ರವಾದಿಗಳ ಹಿತವಚನಗಳ ಪೈಕಿ ಜನರ ನಡುವೆ ಪ್ರಸಾರವಾದ ಮತ್ತು ಜನರು ತಲೆಮಾರುಗಳ ನಂತರ ತಲೆಮಾರುಗಳಿಗೆ ಹಸ್ತಾಂತರಿಸಿ, ಈ ಸಮುದಾಯದವರೆಗೆ ತಲುಪಿದ ಒಂದು ಹಿತವಚನ ಹೀಗಿದೆ: ಅದೇನೆಂದರೆ, ನೀವು ಮಾಡಲು ಉದ್ದೇಶಿಸುವ ಕಾರ್ಯದ ಬಗ್ಗೆ ಆಲೋಚಿಸಿ. ಅದು ನಾಚಿಕೆಯ ಕಾರ್ಯವಲ್ಲದಿದ್ದರೆ ಮಾಡಿರಿ. ನಾಚಿಕೆಯ ಕಾರ್ಯವಾಗಿದ್ದರೆ ಮಾಡಬೇಡಿ. ಏಕೆಂದರೆ, ನಾಚಿಕೆಯು ಕೆಟ್ಟಕೃತ್ಯಗಳನ್ನು ಮಾಡದಂತೆ ತಡೆಯುತ್ತದೆ. ನಾಚಿಕೆಯೆಂಬುದು ಇಲ್ಲದಿದ್ದರೆ ಯಾವುದೇ ಅಶ್ಲೀಲ ಮತ್ತು ದುಷ್ಟಕೃತ್ಯಗಳನ್ನು ಮಾಡಬಹುದಾಗಿದೆ.

http://sunnah.global/hadeeth/kn/show/4559